ಕುಳ್ಳಿರಿಸಿ ಸ್ವಲ್ಪ ಸ್ವಲ್ಪವಾಗಿ ಕಷಾಯ ಕುಡಿಸಿದ. ಹಾಗೇ ಮತ್ತೆ ಮಲಗಿಸಿ, ಕಂಬಳಿ ಹೊದೆಸಿದ. ಕಾಯ ನಿದ್ದೆಗೆ ಜಾರಿದ ಬಳಿಕ ರತ್ನ ಶಿವಯ್ಯನಿಗೆ ಜಂಪಯ್ಯ ಕಳಿಸಿದ, 'ನೀವಿನ್ನು ಹೋಗಿ ಮಲಗಿಕೊಳ್ಳಿ.. ತುಂಬಾ ತಡವಾಗಿದೆ.. ನಾಳೆ ಕೆಲಸ ಇದೆಯಲ್ಲ..' ಶಿವಯ್ಯ, ರತ್ನ ತಮ್ಮ ಮನೆ ಕಡೆ ಹೆಜ್ಜೆ ಹಾಕಿದಾಗ ಬಾಗಿಲಲ್ಲಿ ನಿಂತಿದ್ದ ಕಮಲಿ ಕೇಳಿದಳು, 'ಅದ್ಯಾರು ಅಕ್ಕ..? ಏನಾಯಿತು..?'

ರತ್ನ, 'ಅದೊಂದು ದೊಡ್ಡ ಕತೆ.. ಬಾ.. ಒಳಗೆ..' ಎಂದು ಕಾಯನ ಕತೆ ಹೇಳಲು ಶುರುವಿಟ್ಟುಕೊಂಡಳು. ಪಾಂಡುರಂಗ ನಿದ್ದೆಯ ಮೋಡಿಯಲ್ಲಿದ್ದ.

* * *

ಮುಂಜಾನೆ ಎಚ್ಚರಗೊಂಡ ಕಾಯನಿಗೆ ಹಿಂದಿನ ರಾತ್ರಿಯ ಪ್ರಸಂಗ ನೆನಪಾಗಿ ಮತ್ತೆ ಮನಸ್ಸು ಭಾರವಾಗಿತ್ತು. ಅವನು ಎದ್ದು ಕುಳಿತಿರುವುದನ್ನು ಕಂಡು ರತ್ನ ಎದ್ದು ಬಂದಳು.

'ಈಗ ಹೇಗಿದೆಯೋ ತಮ್ಮಾ ನಿನಗೆ..? ನಿನ್ನ ನೋವು ನನಗೆ ಅರ್ಥ ಆಗುತ್ತಪ್ಪಾ.. ಆದರೆ ಅದರಿಂದ ಬಿಡುಗಡೆ ಇದೆಯಾ ಹೇಳು..? ಅದನ್ನು ಬಿಟ್ಟು ಓಡಿ ಹೋಗಲು ಸಾಧ್ಯನಾ..? ಬದುಕಿರುವವರೆಗೂ ಅವು ಹೆಗಲ ಮೇಲೆ ಹೊತ್ತ ಹೆಣಾನೇ.. ಹೊರಲೇ ಬೇಕು..ನಿನ್ನ ನೋವು ನಿನಗೆ ದೊಡ್ಡದೇ.. ಮಗುವನ್ನು ಕಳೆದು ಕೊಂಡ ನೋವು ಸಣ್ಣದಲ್ಲ.. ನನ್ಗೆ ಅರ್ಥವಾಗುತ್ತೆ.. ಆದರೆ ಬದುಕು ಆ ನೆನಪಲ್ಲೇ, ಅಲ್ಲೇ ನಿಲ್ಲಬಾರದಲ್ವಾ..? ಎಷ್ಟೂಂತ ಮನಸ್ಸಿಗೆ ಕಷ್ಟ ಕೊಟ್ಟುಕೊಳ್ತೀಯಾ..? ದೇಹದಂಡನೆ ಮಾಡಿಕೊಳ್ತೀಯಾ..?'

'ಹೋದವರಿಗೂ ಅದು ಇಷ್ಟ ಆಗಲಾರದು ಕಣೋ ತಮ್ಮಾ.. ಇಷ್ಟು ಸಣ್ಣ ವಯಸ್ಸಿಗೆ ಇದೆಲ್ಲಾ ಯಾಕೆ ತ್ರಾಸು ಮಾಡಿಕೊಳ್ತೀಯಾ..?' ರತ್ನ ಮಾತನಾಡುತ್ತಿರುವಾಗಲೇ ಪಾಂಡುರಂಗ ಎದ್ದು ಮನೆಯಿಂದ ಹೊರ ಬಂದವನು ದೊಡ್ಡಮ್ಮನನ್ನು ಕಂಡು ಅವರ ಬಳಿ ಧಾವಿಸಿದ್ದ. ಅವನು ಓಡಿ ಬರುವಾಗ ಕಾಯನಿಗೆ ಆತ ತನ್ನತ್ತಲೇ ನುಗ್ಗಿ ಬಂದಂತಾಗಿ ಕೈ ಅಯಾಚಿತವಾಗಿ ಚಾಚಿದ್ದ. ಅಪರಿಚಿತನನ್ನು ಕಂಡು ಪಾಂಡುರಂಗನ ಹೆಜ್ಜೆಗಳು ಹಿಮ್ಮೆಟ್ಟಿದ್ದವು.

'ಹೋಗು ರಂಗ.. ಅವ..ನಿನ್ನ ಮಾವ.. ಕಣೋ..' ರತ್ನ ಪ್ರೀತಿಯಿಂದ ನುಡಿದರೂ ಪಾಂಡು ಕಾಯನ ಬಳಿ ಹೋಗಲು ನಿರಾಕರಿಸಿ ರತ್ನಳ ಸೊಂಟವೇರಿದ. ಅವನ ಹಿಂದೆಯೇ ಬಂದ ಕಮಲಿ ತನ್ನ ಮನೆಯ ಬಾಗಿಲಲ್ಲೇ ನಿಂತು ಇತ್ತ ದಿಟ್ಟಿಸ ತೊಡಗಿದಳು. ಅದೇ ವೇಳೆಗೆ ಕಾಯನ ನೋಟವೂ ಅಪ್ರಯತ್ನವಾಗಿ ಕಮಲಿಯ ಮೇಲೆ ಬಿತ್ತು. ಬಿಳಿಯ ತ್ವಚೆ, ಮುಗ್ಧತೆಯೇ ಮೂರ್ತಿವೆತ್ತಂಥ ಮುಖದ ಕಮಲಿಯ ಚಹರೆ ಅವನಿಗೆ ಕಾಣಲಿಲ್ಲ. ಅವನಿಗೆ ಅಲ್ಲಿ ಭಾಸವಾಗಿದ್ದ ಮುಖ ಬೇರೆಯೇ..!

ಅದು ಮಿನಾಲಿಯದ್ದು..!

ಕಾಯ ತಲೆ ಕೆರೆದುಕೊಂಡ. ಇದೇನಾಗುತ್ತಿದೆ ತನಗೆ..? ಇದೇನು ಭ್ರಾಂತು ಹಿಡಿದಿದೆ ತನಗೆ..? ಇವರು ಮಿನಾಲಿ ಅಲ್ಲ.. ಈ ಹುಡುಗ ಸಾರಂಗ ಅಲ್ಲ.. ಹೆಸರಷ್ಟೇ ಹೋಲುತ್ತಿದೆ.. ಇವರು ಕಮಲಿ ಮತ್ತು ಆಕೆಯ ಮಗ ಪಾಂಡುರಂಗ.. ಅಳಿದ ತನ್ನ ಪತ್ನಿಯ ವಯಸ್ಸಿನವಳೇ ಈ ಕಮಲಿಯದ್ದು.. ಇನ್ನು ಸಾರಂಗ ಕೂಡಾ ಪಾಂಡುರಂಗನದ್ದೇ ವಯಸ್ಸು. ಅವನು ತುಸು ದೊಡ್ಡವನಿರಬಹುದು.. ಅವರು ತನ್ನೊಡನೆ ಇದ್ದಿದ್ದರೆ ಎಂದು ಸದಾ ಬಯಸುತ್ತಿದ್ದ ಈ ಮನಸ್ಸಿನ ಆಸೆಗೆ ಇವರುಗಳ ಮುಖವನ್ನು ಏಕೆ ಲಗತಿಸುತ್ತಿದ್ದೇನೆ..? ಸತ್ತ ಆಸೆಗೆ ಮತ್ತೆ ಚಿಗುರಿಸುವ ಯತ್ನ ಮಾಡುತ್ತಿದ್ದೇನೆ..? ಸಮಾಧಿಯನ್ನು ತಾನೇಕೆ ಅಗೆಯುತ್ತಿದ್ದೇನೆ..?

ಅಂಧಕಾರದಲ್ಲೇಕೆ ಬೆಳಕು ಅರಸುತ್ತಿದ್ದೇನೆ.. ಅದು ಮುಗಿದು ಹೋದ ಅಧ್ಯಾಯ.. ಮತ್ತೆ ಪುಟ ಮಗುಚದು.. ಕತೆ ಮತ್ತೆ ಆರಂಭದಿಂದ ಆರಂಭಿಸಲಾಗದು..! ಕಮಲಿ ಅವಳಿದ್ದ ಮನೆಯ ಜಗುಲಿ ಇಳಿದು ಇವರತ್ತ ನಡೆದು ಬರುವಾಗ ಅವಳು ಹೆಜ್ಜೆ ಇಡುತ್ತಿದ್ದದ್ದು ತನ್ನ ಹೃದಯಕ್ಕೆ ಎಂದು ಅವನಿಗೆ ಅನ್ನಿಸಿದ್ದು ಸುಳ್ಳಲ್ಲ.. ಇವಳು



ಮಿನಾಲಿಯೇ.. ಅದೇ ಕೋಲು ಉದ್ದ ಮುಖ .. ಅದೇ ಎಳಸುತನ..ಉದ್ದ ಕೈ ಕಾಲು..! ಅವಳು ಸಮೀಪಿಸಿದಾಗ ಕಾಯ ತನಗರಿವಿಲ್ಲದೇ ಅವನು ಎದ್ದು ನಿಂತಿದ್ದ. ಕಮಲಿ ಅವನ ಕಡೆಗೆ ತಿರುಗಿಯೂ ನೋಡದೇ ರಂಗನನ್ನು ರತ್ನಳಿಂದ ಬಿಡಿಸಿಕೊಂಡು ಕರೆದೊಯ್ದಳು.

'ಇನ್ನೂ ಬೆಳಗಾಗಿಲ್ಲ,... ಸ್ವಲ್ಪ ನಿದ್ದೆ ಮಾಡು.. ಆಮೇಲೆ ಎಬ್ಬಿಸ್ತೇನೆ.. ಆಯ್ತಾ.. ಆಮೇಲೆ ನಾವಿಬ್ರೂ ಆಟ ಆಡೋಣ.' ಎಂದು ರಮಿಸುತ್ತ ರಂಗನನ್ನು ಕರೆದೊಯ್ದಳು. ಕಾಯ ಅವಳು ಹೋದ ದಿಕ್ಕಿನತ್ತ ನೋಡುತ್ತ ನಿಂತ.

'ನಿಂದೊಂದು ಕತೆ ಆದರೆ.. ಇವಳದ್ದೊಂದು ಕತೆ.. ಹೋಗಲಿ ಬಿಡು.. ಎಲ್ಲಾ ಅವರವರ ಹಣೆ ಬರಹ.. ನಿನಗೆ ಕಷಾಯ ಕಳಿಸ್ತೇನೆ .. ಕುಡಿ.. ಇವತ್ತು ಕೆಲಸಕ್ಕೆ ಹೋಗಬೇಡ .. ಆರಾಮ ಮಾಡು.. ಆಯ್ತಾ..?' ರತ್ನ ಮಾತ್ರ ಪ್ರೇಮದಲ್ಲಿ ನುಡಿದಾಗ ಕಾಯ ಗೋಣಾಡಿಸಿ ಒಪ್ಪಿಗೆ ಸೂಚಿಸಿದ. ಅವನಿಗೂ ಆ ದಿನ ಕೆಲಸಕ್ಕೆ ಹೋಗುವ ಮನಸ್ಸಾಗಲಿಲ್ಲ. ತುಸು ಬೆಳಕು ಹರಿಯುತ್ತಲೂ ಶಿವಯ್ಯ ಮತ್ತು ಜಂಪಯ್ಯ ಜಮೀನಿನ ಕಡೆಗೆ ಹೆಜ್ಜೆ ಹಾಕಿದರು. ನಿಂಬೆ ಕಟಾವಿಗೆ ಬಂದಿತ್ತು. ಅಲ್ಲೇ ಇದ್ದ ಜನರಿಗೆ ಇಲ್ಲೇ ಕೂಲಿ ಮಾಡಲು ತಿಳಿಸದ್ದರಿಂದ ಅವರು ತುಸು ಬೇಗನೇ ಕೆಲಸದ ಕಡೆಗೆ ನಡೆದರು. ಕಾಯನಿಗೆ ಬರಲು ಅವರು ಒತ್ತಾಯಿಸಲಿಲ್ಲ. ರತ್ನ ಆಗಲೇ ಅವರಿಗೆ ಕಾಯನನ್ನು ಕರೆಯದಂತೆ ತಾಕೀತು ಮಾಡಿದಳು. ಒಂದು ಹೊತ್ತಿನ ಕೆಲಸ ಮುಗಿಸಿ, ಬುತ್ತಿ ಕಟ್ಟಿಕೊಂಡು ತಾನೇ ಹೊರಡುವವಳಿದ್ದಳು. ಕಾಯ ಅಲ್ಲಿ ಅಡ್ಡಾಗಿದ್ದಾಗಲೇ ಕಮಲಿ ಅವನಿಗಾಗಿ ಕಷಾಯ ಹಿಡಿದು ಬಂದಿದ್ದಳು. ಜೊತೆಗೆ ಪಾಂಡುರಂಗನೂ ಇದ್ದ. ಅವನಿಗೆ ಅಲ್ಲಿನ ಜನ, ಪರಿಸರ ಹೊಸತಾದ್ದರಿಂದ ಅವನು ಅಮ್ಮನ ಸೆರಗು ಬಿಟ್ಟು ಕದಲುತ್ತಿರಲಿಲ್ಲ. ಕಾಯ ಮರು ಮಾತಿಲ್ಲದೇ ಅವಳಿಂದ ಕಷಾಯ ಪಡೆದು ಗಂಟಲಿಗೆ ಸುರಿದುಕೊಂಡು ಲೋಟವನ್ನು ಅವಳಿಗೆ ಹಸ್ತಾಂತರಿಸಿದ. ರಂಗನನ್ನ ನೋಡುತ್ತಲೇ ಅವನಿಗೆ ಮಮತೆ ಉಕ್ಕಿ ಬಂದಿತ್ತು.

'ಬಾ ಸಾರಂಗ.. ಅಲ್ಲ.. ಪಾಂಡುರಂಗ..' ಅವನೇ ತಿದ್ದಿಕೊಂಡ.

'ಹೋಗಪ್ಪಾ ..ಹೋಗು.. ನನಗೆ ಸ್ವಲ್ಪ ಕೆಲಸವಿದೆ.. ಮಾಮ.. ನಿನಗೆ ಆಟ ಆಡಿಸ್ತಾರೆ.. ಹೋಗು..' ಕಮಲಿ ನುಡಿದಾಗ ಪಾಂಡುರಂಗ ಮೊದಲು ಕೇಳಲಿಲ್ಲ. ಕಾಯನಿಗೆ ಕಮಲಿಯ ಮಾತುಗಳಿಂದ ಹೊಸ ಹುರುಪು ಬಂದಂತಾಗಿತ್ತು. ಕಂಬಳಿ ಬದಿಗೆ ಸರಿಸಿ ಎದ್ದು ಪಾಂಡುರಂಗ ಕೊಸರಾಡಿದರೂ, ಬಲವಂತವಾಗಿ ಎಳೆದುಕೊಂಡ. ಕಮಲಿ ಅವನೆಡೆಗೆ ದೀನವಾಗಿ ನೋಡುತ್ತ, 'ಸ್ವಲ್ಪ ಮಗೂನ್ನ ನೋಡಿಕೊಳ್ತೀರಾ.. ಅಕ್ಕ ಒಬ್ಬಳೇ ಕೆಲಸ ಮಾಡ್ತಿದ್ದಾಳೆ.. ನಾನು ಅವಳಿಗೆ ಸ್ವಲ್ಪ ಸಹಾಯ ಮಾಡ್ತೀನಿ.. ಆಗಬಹುದಾ..?' ಅವನಿಗೆ ಇಲ್ಲವೆನ್ನಲು ಮನಸ್ಸೇ ಬರಲಿಲ್ಲ. ಪಾಂಡುರಂಗ ಬಿಕ್ಕಳಿಸಲು ಶುರು ಮಾಡಿದರೂ ಕೇಳದೇ, ಹೆಗಲ ಮೇಲೆ ಹಾಕಿಕೊಂಡು ಹೆಜ್ಜೆ ಹಾಕತೊಡಗಿದ.

'ಅಲ್ಲಿ ನೋಡು.. ಗಿಣಿ.. ಹೇಗೆ ಕೂಗ್ತಿದೆ..' ಅತ್ತಿತ್ತ ಪಕ್ಷಿ, ಚಿಟ್ಟೆ ಕೀಟ, ಹೂಗಳನ್ನು ಹತ್ತಿರದಿಂದ ತೋರಿಸುತ್ತ ಅವನ ಧ್ಯಾನ ಬೇರೆಡೆಗೆ ವರ್ಗಾಯಿಸಿದೊಡನೆ ಪಾಂಡು ಅವನೊಂದಿಗೆ ನಿಧಾನವಾಗಿ ಹೊಂದಿಕೊಂಡ.

ರತ್ನವ್ವ ಅವನನ್ನು ಹುಡುಕಿಕೊಂಡು ಬರಬೇಕಾಯಿತು. 'ಮಗೂನ್ನ ಕರ್ಕೊಂಡು ಹೋಗು ಮನೇಗೆ.. ಅವನು ಬೆಳಿಗ್ಗೆಯಿಂದ ಏನೂ ತಿಂದಿಲ್ಲ.. ಹಾಗೇ ನೀನೂ ಏನಾದರೂ ಹೊಟ್ಟೆಗೆ ಹಾಕಿಕೋ.. ಕಮಲಿಗೆ ನಿನ್ಗೆ ಉಣ್ಣಕ್ಕೆ ಇಡಲು ಹೇಳಿದೀನಿ.. ಸಂಕೋಚ ಪಡಬೇಡ' ಕಾಯ ಒಪ್ಪಿ ನಿಧಾನವಾಗಿ ಮನೆಯ ಕಡೆಗೆ ಹೆಜ್ಜೆ ಹಾಕಿದ. ಪಾಂಡು ಈಗ, ಮಾಮ.. ಗಿಣಿ.. ಮಾಮ.. ಚಿಟ್ಟೆ..' ಎಂದು ತೋರಿಸುತ್ತಾ ಸಲುಗೆ ಬೆಳೆಸಿಕೊಂಡದ್ದನ್ನು ನೋಡಿ ಕಮಲಿ ಅಚ್ಚರಿಪಟ್ಟಳು.

'ಸದ್ಯ..ಅವನು ನಿಮಗಾದರೂ ಹೊಂದಿಕೊಂಡನಲ್ಲ.. ಅವನನ್ನು ಸುಧಾರಿಸುವುದೇ ಕಷ್ಟ.. ಕೈ ಕಾಲು ತೊಳೀರಿ.. ಊಟ ಬಡಿಸ್ತೀನಿ..'

'ಇಲ್ಲೇ ಹೊರಗೆ ಉಣ್ತೇನಿ.. ಇಲ್ಲೇ ತಂದುಕೊಡಿ..' ಎಂದ ಅವಳ ಮುಖ ನೋಡದೆ. ಅಕ್ಕನ ಮೂಲಕ ಎಲ್ಲಾ ತಿಳಿದಿದ್ದ ಕಮಲಿ ಹೆಚ್ಚು ಮಾತು ಬೆಳೆಸದೆ ಅಂತೆಯೇ ಮಾಡಿದಳು.

(ಸಶೇಷ)